ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4630

ಸದಸ್ಯರ ಹೆಸರು : ಶ್ರೀ ವೈಜ್ಯನಾಥ ಪಾಟೀಲ್ (ಚಿಂಚೋಳಿ)

ಉತ್ತರಿಸುವ ಸಚಿವರು : ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು (ಲೋಕೋಪಯೋಗಿ ಮತ್ತು ಇಂಧನ ಸಚಿವರ ಪರವಾಗಿ)

	ಪ್ರಶ್ನೆ	ಉತ್ತರ
1	ಗುಲ್ಬರ್ಗಾ ಜಿಲ್ಲೆಯಲ್ಲಿ ರಸ್ತೆ ನಿರ್ಮಾಣ ಮತ್ತು ದುರಸ್ತಿ ಕಾಮಗಾರಿಗಳಿಗೆ ಕಳೆದ ಮೂರು ವರ್ಷಗಳಲ್ಲಿ ಅದ ವೆಚ್ಚವೆಷ್ಟು? (ವಿವರ ನೀಡುವುದು)	ಗುಲ್ಬರ್ಗಾ ಜಿಲ್ಲೆಯಲ್ಲಿ ರಸ್ತೆ ನಿರ್ಮಾಣ ಮತ್ತು ದುರಸ್ತಿ ಕಾಮಗಾರಿಗಳಿಗೆ ಕಳೆದ ಮೂರು ವರ್ಷಗಳಲ್ಲಿ ಅದ ವೆಚ್ಚದ ವಿವರ ಈ ಕೆಳಕಂಡಂತಿದೆ: (ರೂ. ಲಕ್ಷಗಳಲ್ಲಿ)

ವರ್ಷ	ರಸ್ತೆ ನಿರ್ಮಾಣಕ್ಕಾಗಿ ಮಾಡಿದ ವೆಚ್ಚ	ರಸ್ತೆ ದುರಸ್ತಿಗಾಗಿ ಮಾಡಿದ ವೆಚ್ಚ
ಗುಲ್ಬರ್ಗಾ ಜಿಲ್ಲೆ (ಗುಲ್ಬರ್ಗಾ ವಿಭಾಗ)		
2002-03	1062.07	217.06
2003-04	808.70	199.82
2004-05	696.90	455.79
ಒಟ್ಟು	2567.67	872.67
ಗುಲ್ಬರ್ಗಾ ಜಿಲ್ಲೆ (ಯಾದಗಿರಿ ವಿಭಾಗ)		
2002-03	1306.33	278.27
2003-04	1241.46	170.38
2004-05	1910.83	680.86
ಒಟ್ಟು	4458.62	1129.51

2	ಚಂಚೋಳಿ ತಾಲ್ಲೂಕಿನಲ್ಲಿ ಕೈಗೊಂಡಿರುವ ರಸ್ತೆ ನಿರ್ಮಾಣ, ದುರಸ್ತಿ ನಿರ್ವಹಣೆಗೆ ಆದ ವೆಚ್ಚವೆಷ್ಟು? (ಪ್ರತ್ಯೇಕವಾಗಿ ವಿವರ ನೀಡುವುದು)?	ಚಂಚೋಳಿ ತಾಲ್ಲೂಕಿನಲ್ಲಿ ಕೈಗೊಂಡಿರುವ ರಸ್ತೆ ನಿರ್ಮಾಣ, ದುರಸ್ತಿ ಮತ್ತು ನಿರ್ವಹಣೆಗೆ ಆದ ವೆಚ್ಚದ ವಿವರ ಈ ಕೆಳಕಂಡಂತಿದೆ: (ರೂ. ಲಕ್ಷಗಳಲ್ಲಿ)

ವರ್ಷ	ರಸ್ತೆ ನಿರ್ಮಾಣಕ್ಕಾಗಿ ಮಾಡಿದ ವೆಚ್ಚ	ರಸ್ತೆ ದುರಸ್ತಿಗೆ ಮಾಡಿದ ವೆಚ್ಚ	ರಸ್ತೆ ನಿರ್ವಹಣೆ ಮಾಡಿದ ವೆಚ್ಚ	ಒಟ್ಟು
2002–03	145.63	15.26	13.92	174.81
2003–04	56.55	6.66	13.72	76.93
2004–05	108.73	19.29	8.64	136.66
ಒಟ್ಟು	310.91	41.21	36.28	388.40

ಶ್ರೀ ವೈಜನಾಥ ಪಾಟೀಲ್ :– ಇದು ಬಹಳಷ್ಟು ಕಡೆ ಇದೆ. ಗುಲಬರ್ಗಾ ಜಿಲ್ಲೆಯಲ್ಲಿ ಚಂಚೋಳಿ ತಾಲ್ಲೂಕಿನ ಬಗ್ಗೆ ನಾನು ಕೆಲವು ಮಾಹಿತಿಗಳನ್ನು ಕೊಟ್ಟಿದ್ದೇನೆ. ರಸ್ತೆ ದುರಸ್ತಿ ಮೇಲೆ, ಮೇಟೆನೆನ್ಸ್ ಮೇಲೆ ಇಷ್ಟು ಖರ್ಚು ಮಾಡಿದ್ದು ಬಿಟ್ಟು ಅಲ್ಲಿ ಹೋದರೆ, ಹೋದ 3–4 ವರ್ಷಗಳಲ್ಲಿ ಪ್ಯಾಕೇಜ್ ಸಿಸ್ಟಂ ಮಾಡಿ ಮೇನಟೆನೆನ್ಸ್ ಅವರಿಗೆ ಕೊಟ್ಟ ಸಲುವಾಗಿ ಆ ಕಂಟ್ರಾಕ್ಟರ್ಸ್ ಮೇನ್ ರೋಡ್‌ನಲ್ಲಿ ಅಲ್ಲಿ ಮಾಡುತ್ತಾರೆ. ಬೇರೆ ಕಡೆ ತಾಲ್ಲೂಕು ರೋಡ್ಸ್‌ನಲ್ಲಿ ಎಲ್ಲಿಯೂ 3 ವರ್ಷಗಳಲ್ಲಿ ಬಂದಿಲ್ಲವೆಂದು ಪ್ರೈವೇಟ್‌ನಲ್ಲಿ ಅಧಿಕಾರಿಗಳೇ ಹೇಳುತ್ತಾರೆ. ಆ ಜನರು, ಆ ಊರಿನವರು ಹೇಳುತ್ತಾರೆ. ಯಾರೂ ಬಂದಿಲ್ಲ. 3 ವರ್ಷ ಯಾವುದೂ ಮೇನ್‌ಟೆನೆನ್ಸ್ ಮಾಡಿಲ್ಲ. ರೋಡ್ಸ್ ಪರಿಸ್ಥಿತಿ ಇಷ್ಟು ಕೆಟ್ಟಿದೆ, ಅದರ ಬಗ್ಗೆ ಏನಾದರೂ ತಾವು ಎನ್‌ಕ್ವಾಯರಿ ಮಾಡುತ್ತೀರಾ? ಎಂದು ನಾನು ಸರ್ಕಾರಕ್ಕೆ ಕೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕೈಗಾರಿಕಾ ಸಚಿವರು) (ಲೋಕೋಪಯೋಗಿ ಮತ್ತು ಇಂಧನ ಇಲಾಖಾ ಸಚಿವರ ಪರವಾಗಿ):– ಕಳೆದ 3 ವರ್ಷಗಳಲ್ಲಿ ಗುಲಬರ್ಗಾ ಜಿಲ್ಲೆ ಮತ್ತು ಗುಲಬರ್ಗಾ ಕ್ಷೇತ್ರದ ಚಿಂಚೋಳಿ ಕ್ಷೇತ್ರದಲ್ಲಿ 2002–03ನೇ ಸಾಲಿನಲ್ಲಿ 174 ಲಕ್ಷ ರೂಪಾಯಿಗಳನ್ನು ಈ ರಸ್ತೆ ನಿರ್ಮಾಣ ಮತ್ತು ದುರಸ್ತಿಗೋಸ್ಕರ ಖರ್ಚು ಮಾಡಿದ್ದೇವೆ. 2003–04ರಲ್ಲಿ 76 ಲಕ್ಷ ರೂಪಾಯಿ ಖರ್ಚಾಗಿದೆ. 2004–05ರಲ್ಲಿ 136.66 ಲಕ್ಷ ರೂಪಾಯಿ ಖರ್ಚಾಗಿರುವುದು ನಿಜ. ಇದು ಸರ್ಕಾರದ ಅಧಿಕಾರಿಗಳು ಮತ್ತು ಲೋಕೋಪಯೋಗಿ ಇಲಾಖಾ ಕಾರ್ಯದರ್ಶಿಗಳಿಗೆ ಸಂಬಂಧಪಟ್ಟಂಥ ಇಂಜಿನಿಯರುಗಳು ಕಳುಹಿಸಿರುವ ವರದಿಯಲ್ಲಿ ನಮೂದನೆ ಆಗಿರುವ ವಿಚಾರ. ಮಾನ್ಯ ಸದಸ್ಯರಿಗೆ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಯಾರಾದರೂ ತಮಗೆ ಅಧಿಕಾರಿಗಳು ಖಾಸಗಿಯಾಗಿ ಹೇಳಿದ್ದರೆ, ಅವರ ಹೆಸರು ಬೇಕಾಗಿಲ್ಲ. ಖಾಸಗಿಯಾಗಿಯೇ ನಮಗೆ ಬಂದು ಹೇಳಿ. ಯಾರು ಈ ರೀತಿ ಹೇಳಿದ್ದಾರೆ? ಎಂದು ಹೇಳಿ. ಇಂಥ ಕೆಲಸ ಆಗಿಲ್ಲವೆಂದು ಹೇಳಿ. ಖಂಡಿತವಾಗಿ, ಆ ಬಗ್ಗೆ ಎನಕ್ವಯರಿ ಮಾಡಿ, ಅವರು ತಪ್ಪು ಮಾಡಿದ್ದರೆ,ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳೋಣ.

ಶ್ರೀ ವೈಜನಾಥ ಪಾಟೀಲ್ :– ನಿರ್ಮಾಣಕ್ಕಾಗಿ ನಬಾರ್ಡ್ ಮತ್ತು ಬೇರೆ ಹಣ ಇದರಲ್ಲಿ ಸೇರಿದೆಯೇ? ಪಿಡಬ್ಲ್ಯುಡಿಯದ್ದು ಸೆಪರೇಟ್ ಇದೆಯೇ? ಎಂದು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ :– ಅದರ ವಿವರಗಳನ್ನು ನಾನು ನಂತರ ಕಳುಹಿಸುತ್ತೇನೆ. ಏಕೆಂದರೆ, ಅದು ಪ್ರಶ್ನೆಯ ಒಂದು ಭಾಗ ಆಗಿರಲಿಲ್ಲ. ಅವರು ಎನ್.ಹೆಚ್.ನಲ್ಲಿ ಎಷ್ಟು ಸಿ.ಆರ್.ಎಫ್.ನಲ್ಲಿ ಎಷ್ಟು ನಬಾರ್ಡ್‌ನಲ್ಲಿ ಎಷ್ಟು ಎನ್ನುವುದನ್ನು ಕೇಳಿದ್ದಿದ್ದರೆ ನಾನು ಕೊಡುತ್ತಿದ್ದೆ. ನಾನು ನಂತರ ಕಳುಹಿಸಿಕೊಡುತ್ತೇನೆ.

ಶ್ರೀ ವೈಜನಾಥ ಪಾಟೀಲ್ :– ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು :– ಎರಡೂ ಉಪ ಪ್ರಶ್ನೆಗಳನ್ನೂ ಕೇಳಿದ್ದೀರಿ.

ಶ್ರೀ ವೈಜನಾಥ ಪಾಟೀಲ್ :– ರೋಡ್ ಮೇನ್‌ಟೆನೆನ್ಸ್ ಹೇಗೆ ಮಾಡುತ್ತಾರೆ? ಮತ್ತೆ ಪುನಃ ಹೈದರಾಬಾದ್, ಮತ್ತೊಬ್ಬರಿಗೆ ಅವರು ಪ್ಯಾಕೇಜ್ ಸಿಸ್ಟಂ ಮೇಲೆ ಕೊಟ್ಟರೆ, ನಾವು ಅಲ್ಲಿ ಅಧಿಕಾರಿಗಳಿಗೂ ಕೇಳುವುದಕ್ಕೆ ಸಾಧ್ಯವಿಲ್ಲ. ಮತ್ತು ಅದೇ ಪರಿಸ್ಥಿತಿ ಆಗುತ್ತದೆ. ವ್ಯವಸ್ಥೆಯರನ್ನು ಬದಲಾವಣೆ ಮಾಡುತ್ತೀರಾ ? ಮೊದಲಿನ ಸಿಸ್ಟಂ ಇರುತ್ತದೆಯೇ?

ಶ್ರೀ ಪಿ.ಜಿ.ಆರ್.ಸಿಂಧ್ಯ :– ಕೆಲವು ಕಡೆಗಳಲ್ಲಿ ಪ್ಯಾಕೇಜ್ ಸಿಸ್ಟಂ ಸಕ್ಸಸ್‌ಫುಲ್ ಆಗಿ ಕೆಲಸ ಮಾಡಿರುವುದು ಸರ್ಕಾರದ ಗಮನದಲ್ಲಿದೆ. ಕೆಲವು ಕಡೆ ಈ ರೀತಿ ಆಗದೇ ಇರುವಂಥದ್ದು ಪ್ರಾಪರ್ ಸೂಪರ್‌ವಿಜನ್ ಇಲ್ಲದಿರುವುದರಿಂದ ಆಗಿರುವುದು ಸಹಜ. ಜನ ಪ್ರತಿನಿಧಿಯಾಗಿರುವುದರಿಂದ ಅವರ ಗಮನಕ್ಕೆ ಇದು ಬಂದಿರುತ್ತದೆ. ಖಂಡಿತವಾಗಿ, ಅದನ್ನು ಸರಿಪಡಿಸಲಿಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.